# ಜಿಂಕೆ ವನ

ಈ ಜಿಂಕೆ ವನ ನಾಮದ ಚಿಲುಮೆಯಲ್ಲಿದ್ದು, ಸುಪ್ರಸಿದ್ಧ ಗಿರಿಧಾಮ ದೇವರಾಯನದುರ್ಗಕ್ಕೆ ಹೋಗುವ ಮಾರ್ಗದಲ್ಲಿದೆ. ಹಿಂಡು ಹಿಂಡಾಗಿ ಸಂಚರಿಸುವ ಹರಿಣಗಳು, ಒಂದಕ್ಕೊಂದು ಜಗಳವಾಡಿ ಗುದ್ದಾಡುವ, ಮುದ್ದಾಡುವ ಮರಿ ಹರಿಣಗಳು, ಚಂಗನೆ ಒಂದೆಡೆಯಿಂದ ಮತ್ತೊಂದೆಡೆಗೆ ಮಿಂಚಿನಂತೆ ನೆಗೆದು ಓಡಾಡುವ ದೃಶ್ಯಗಳಂತೂ ಭೇಟಿ ನೀಡುವವರ ಮನಕ್ಕೆ ರಸದೌತಣವನ್ನು ನೀಡುತ್ತದೆ.

**-ಶಶಿರೇಖಾ ನಾಗೇಂದ್ರ, ತುಮಕೂರು**





# ಮರದ ಮಕ್ಕಳ ಆಟಿಕೆಗಳು

ಮಕ್ಕಳು ಆಟ ಆಡುವ ಕ್ಷಣಗಳೇ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಆಟಿಕೆಗಳೂ ಅಪರೂಪವಾಗಿ ಬಿಟ್ಟಿವೆ. ಆದರೆ ಯಲ್ಲಾಪುರದ ಸಂತೋಷ ಗುಡಿಗಾರರ ಕಲಾಕೇಂದ್ರದಲ್ಲಿ ಮಕ್ಕಳಿಗೆ ಆಕರ್ಷಕ ಎನಿಸುವ ವಿಭಿನ್ನ ಬಗೆಯ ಮಕ್ಕಳ ಆಟಿಕೆಗಳು ಕಾಣ ಸಿಗುತ್ತವೆ. ಹಳೆಯ ಕಾಲದಲ್ಲಿ ಬಳಸುತ್ತಿದ್ದ ವಿಶಿಷ್ಟ ಮೋಜಿನ ಮರದ ಕೆತ್ತನೆಯ ಈ ಆಟಿಕೆಗಳನ್ನು ಅಗ್ಗದ ದರದಲ್ಲಿ ತಯಾರಿಸಿ ಕೊಡುತ್ತಾರೆ. ಪರಿಸರಕ್ಕೆ ಪೂರಕವಾದ ಇಂತಹ ಮಕ್ಕಳ ಆಟಿಕೆಗಳು ಮಕ್ಕಳಿಗೆ ಪರಿಚಯವಾಗಬೇಕಿದೆ.

**-ದತ್ತಾತ್ರೇಯಭಟ್ಟ, ಕಣ್ಣಿಪಾಲ**

# ಇದು ನೇತ್ರದಾನಿಗಳ ಊರು!

ಸುಮಾರು ಇನ್ನೂರ ಐವತ್ತು ಜನಸಂಖ್ಯೆ ಇರುವ ಮುಂಡಿಗೆಸರ ಶಿರಸಿ ಸಮೀಪದ ಒಂದು ಪುಟ್ಟ ಗ್ರಾಮ. ಹುಡುಕಾಡಿದರೆ ಹೆಗ್ಗಾಡಿನಲ್ಲಿ ಮರೆಯಾಗಿರುವ ಹೆಂಚಿನ ಮನೆಗಳನ್ನು ಅಲ್ಲೊಂದು ಇಲ್ಲೊಂದು ಕಾಣಬಹುದು. ಇಲ್ಲಿ ಅಂಗಡಿ ಇಲ್ಲ, ಹೋಟೆಲ್ ಇಲ್ಲ, ಒಂದು ಬಸ್ ನಿಲ್ದಾಣವಿಲ್ಲ. ಹಾಗೆ ನೋಡಿದರೆ ಇಲ್ಲಿಗೆ ಬಸ್ ಸಂಪರ್ಕವೇ ಇಲ್ಲ!

2009ರಲ್ಲಿ ಈ ಶಾಲೆಯ ಶತಮಾನೋತ್ಸವ ಸಂದರ್ಭದಲ್ಲಿ ನೇತ್ರದಾನಿಗಳ ಸಂಘ ಸ್ಥಾಪನೆಯಾಯಿತು. ಅಬಾಲವೃದ್ಧರಾದಿಯಾಗಿ ಗ್ರಾಮದ ಸಮಸ್ತರೂ ನೇತ್ರದಾನಿಗಳಾಗಿ ನೋಂದಾಯಿಸಲ್ಪಟ್ಟರು. ಈಗಾಗಲೇ ಅನೇಕರ ಕಣ್ಣುಗಳು ಸಾರ್ಥಕತೆಯನ್ನು ಕಂಡಿವೆ! ಶಿರಸಿಯಂತಹ ಸಣ್ಣ ಊರಿನಲ್ಲಿ ನೇತ್ರ ಬ್ಯಾಂಕ್ ಸ್ಥಾಪನೆಯಾಗಿದೆ. ಈ ಎಲ್ಲಾ ಸಾಧನೆಗಳಿಗೆ ಸ್ಫೂರ್ತಿಯನ್ನೂ, ಮಾರ್ಗದರ್ಶನವನ್ನೂ ಕೊಟ್ಟವರು ಹುಬ್ಬಳ್ಳಿಯ ನೇತ್ರತಜ್ಞ, ಡಾ. ಎಂ.ಎಂ. ಜೋಷಿ.

**-ಎನ್.ಎಸ್. ನಂದಿನಿ, ಬೆಂಗಳೂರು**

